**ದಿನಾಂಕ** 10.10.2024 **CC** 1258/2023

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.** **ಪಿಡಬ್ಲ್ಯೂ–1**

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದಃ

ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ . ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಸ್ವಂತ ಊರು ತರಿಕೆರೆ ತಾಲೂಕು ಹೊಸಳ್ಳಿ ತಾಂಡ್ಯಾ ಆಗಿದ್ದು, ನಾನು ಅಲ್ಲಿಯೇ ವಾಸವಾಗಿದ್ದೇನೆ. ನನ್ನ ಗಂಡ ಕೆಲಸವಿದ್ದಾಗ ಉಕ್ಕಡಗಾತ್ರಿಗೆ ಬಂದು ಹೋಗುತ್ತಿದ್ದರು ಎಂದರೆ ಸಾಕ್ಷಿಯು ಇಲ್ಲ ನಾವು ಉಕ್ಕಡಗಾತ್ರಿಯಲ್ಲಿಯೇ ವಾಸವಾಗಿದ್ದೇವು ಎಂದು ನುಡಿಯುತ್ತಾರೆ. ನಾವು ಹೊಸಳ್ಳಿ ಯ ನ್ಯಾಯಾ ಬೆಲೆಅಂಗಡಿದಯಲ್ಲಿ ಮನೆಗೆ ಬೇಕಾದ ಸಾಮಾನುಗಳನ್ನು ಖರೀದಿ ಮಾಡುತ್ತೇವೆ ಎಂದರೆ ಸರಿ. ಊರಲ್ಲಿ ಖಾಯಂ ವಾಸವಾಗಿರುತ್ತಾರೆ ಅವರಿಗೆ ಮಾತ್ರ ನ್ಯಾಯಾಬೆಲೆ ಅಂಗಡಿಯಿಂದ ದವಸಧಾನ್ಯಗಳನ್ನು ಕೊಡುತ್ತಾರೆ ಎಂದರೆ ಸರಿ. ನನ್ನ ಅಣ್ಣ ಪ್ರದೀಪ ನನ್ನ ಜೊತೆ ವಾಸವಾಗಿದ್ದಾರೆ ಎಂದರೆ ಸರಿ. ನನ್ನ ಅಣ್ಣ ಸಹ ಹೊಸಳ್ಳಿ ತಾಂಡ್ಯದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ನನ್ನ ಗಂಡನಿಗೆ ಅಪಘಾತ ಬಗ್ಗೆ ಯಾವುದೇ ತಿಳಿಸಿದರು ಎಂದರೆ ಸಾಕ್ಷಿಯು ನಾನೇ ನೋಡಿದ್ದೇನೆ ಎಂದು ನುಡಿಯುತ್ತಾರೆ. ಅಪಘಾತವಾಗಿದೆ ಎಂದು ಹೇಳಲಾದ ಸಮಯದಲ್ಲಿ ನಾನು ಗೋಡೊನ ಪಕ್ಕಕ್ಕೆ ಇದ್ದೆ. ಅಲ್ಲಿ ನಾನು ನನ್ನ ಮಗು ಇದ್ದೇವು. ನನ್ನ ಗಂಡ ಆಟೋದಲ್ಲಿ ಸಿಮೆಂಟ್ ಚೀಲಗಳನ್ನು ಇಳಿಸುತ್ತಿದ್ದಾಗ ನಾನು ಮತ್ತು ನನ್ನ ಮಗು ಸ್ಥಳದಲ್ಲಿಯೇ ಇದ್ದೇವು, ನನ್ನ ಮಾವ ದೇವಸ್ಥಾನದ ಹತ್ತಿರದ ಮೆಟ್ಟಿಲು ಮೇಲೆ ಇದ್ದರು.

ದೂರಿನಲ್ಲಿ ಬರೆದ ಎಲ್ಲ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಪಿ .1 ನ್ನು ದೂರನ್ನು ನನ್ನ ಅಣ್ಣ ಪ್ರದೀಪ್ ಬರೆದಿರುತ್ತಾರೆ. ಸದರಿ ನಿಪಿ.1 ನ್ನು ನನ್ನ ಅಣ್ಣ ಮಲೆಬೆನ್ನೂರು ಪೋಲಿಸ್ ಠಾಣೆಯಲ್ಲಿ ಬರೆದರು. ನಂತರ ನನ್ನ ಅಣ್ಣ ನನಗೆ ಸಹಿ ಮಾಡು ಎಂದು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ. ನಿಪಿ.1 ದೂರಿನಲ್ಲಿ ನನ್ನ ಅಣ್ಣನ ಸಹಿ ಇಲ್ಲ ಎಂದರೆ ನಿಜ. ನಿಪಿ.1 ಕ್ಕೆ ಸಹಿ ಮಾಡುವ ಮೊದಲು ಅದರಲ್ಲಿ ಏನು ಬರೆದಿದೆ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ ಎಂದರೆ ಸರಿ. ನಾನು ನನ್ನ ದೂರಿನಲ್ಲಿ ''**ಅಲ್ಲಿಯೇ ಹೊಳೆದಂಡೆಯಲ್ಲಿ ನಾನು ನನ್ನ ಮಾವನಾದ ಚಾಸಾ.6 ನಾನ್ಯಾನಾಯ್ಕು ಮತ್ತು ಮಗನೊಂದಿಗೆ ಮಾತಾನಾಡುತ್ತಾ ಕುಳಿತುಕೊಂಡಿದ್ದು**'' ಎಂದು ಬರೆದಿದೆ ಎಂದರೆ ಸರಿ. ಆದ್ದರಿಂದ ನಿಪಿ.1 ರ ಸದರಿ ಭಾಗವನ್ನು ನಿಡಿ.1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಪೋಟೊವನ್ನು ತೊರಿಸಿ ಅದರಲ್ಲಿ ಹೊಳೆ ಮತ್ತು ಹೊಳೆ ದಂಡೆ ಇದೆ ಎಂದರೆ ಸಾಕ್ಷಿಯು ನೋಡಿ ಒಪ್ಪಿಕೊಂಡಿದ್ದರಿಂದ, ಸದರಿ ಪೋಟೊವನ್ನು ನಿಡಿ.2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಪೋಟೂವನ್ನು ತೋರಿಸಲಾಗಿ, ಹೊಳೆ ದಂಡೆಯ ಹತ್ತಿರ ಗೇಟ್ ಇರುವುದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ.3 ಎಂದು ಗುರುತಿಸಲಾಯಿತು. ನಿಡಿ.2 ರಲ್ಲಿರುವ 50 ರಿಂದ 60 ಮೆಟ್ಟಿಲುಗಳ ನಂತರ ನಿಡಿ.3 ರಲ್ಲಿರುವ ಗೇಟ್ ಬರುತ್ತದೆ ಎಂದರೆ ಸರಿ. ಗೇಟ್ ದಾಟಿದ ನಂತರ ಹೊಳೆ ದಂಡೆ ಬರುತ್ತದೆ ಎಂದರೆ ಸರಿ. ನಿಪಿ.3 ರಲ್ಲಿ ಅಣ್ಣಪೂರ್ಣೇಶ್ವರಿ ಗೋಡಾಮಿನ ಉತ್ತಕ್ಕೆ 50 ಅಡಿ ಪ್ರದೇಶದ ನಂತರ ತುಂಗಭದ್ರಾ ಹೊಳೆ ರಸ್ತೆ ಇದೆ ಎಂದರೆ ಸರಿ. ತುಂಗಭದ್ರಾ ಹೊಳೆ ರಸ್ತೆಯ ಪೂರ್ವಕ್ಕೆ ಸುಮಾರು 100 ಅಡಿ ಅಂತರದ ನಂತರ ದೇವಸ್ಥಾನದ ಖಾಲಿ ಮತ್ತು ಮಂಟಪಗಳು ಇವೆ ಎಂದರೆ ಸರಿ. ಮಂಟಪಗಳ ಪೂರ್ವಕ್ಕೆ ಮೆಟ್ಟಿಲು, ಅದಾದ ನಂತರ ತುಂಗಭದ್ರಾ ನದಿ ಇದೆ ಎಂದರೆ ಸರಿ.

ನಿಡಿ.3 ರಲ್ಲಿ ಕಾಣುತ್ತಿರುವ ಗೇಟ್ ನ್ನು ಸಂಜೆ 6.30 ಗಂಟೆಗೆ ಮುಚ್ಚಲಾಗುತ್ತದೆ ಎಂದರೆ ಸರಿ. ಅದರ ಬೀಗವನ್ನು ಬೆಳಗಿನ ಜಾವ 3.00 ಗಂಟೆಗೆ ತೆಗೆಯುತ್ತಾರೆ. ನನ್ನ ಗಂಡನ ಮರಣಾನಂತರ ಪರಿಹಾರಕ್ಕಾಗಿ ನಾವು ಅರ್ಜಿಯನ್ನು ಸಲ್ಲಿಸಿದ್ದು, ಅದಕ್ಕೆ ನೇಮಕ ಮಾಡಿದ ವಕೀಲರು ನನ್ನ ಅಣ್ಣನಿಗೆ ಗೊತ್ತು. ಸದರಿ ಅರ್ಜಿಯಲ್ಲಿ ನಾನು ಸುಮಾರು 20 ಲಕ್ಷ ರೂಗಳನ್ನು ಪರಿಹಾರವಾಗಿ ಪಡೆದಿರುತ್ತೇನೆ ಎಂದರೆ ಸರಿ. ಎಂ ವಿ ಸಿ ಪ್ರಕರಣ ಮತ್ತು ಪ್ರಸ್ತುತ

ಪ್ರಕರಣವನ್ನು ನನ್ನ ಅಣ್ಣ ನೀಡಿದ ಮಾಹಿತಿ ಮೇರೆಗೆ ದಾಖಲಾಗಿರುತ್ತವೆ ಎಂದರೆ ನಿಜ. ನನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ವಾಹನ ಇಳಿಜಾರಿನ ಸ್ಥಳದಲ್ಲಿ ನಿಂತಿದ್ದು, ಸದರಿ ಟಾಟಾ ಎಎಸ್ ವಾಹನದ ಚಾಲಕ ವಾಹನದ ಒಳಗಡೆ ಇದ್ದು. . . . . . . . ಅಪಘಾತ ಸಂಭವಿಸಿತು ಎಂದು ಹೇಳಿದ್ದು, ಅದನ್ನು ನಿಪಿ.1 ದೂರಿನಲ್ಲಿ ಬರೆಯಲಾಗಿದೆಯೇ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಪಿ.1 ದೂರಿನಲ್ಲಿ ನಂತರ ಆಟೋ ಚಾಲಕನ ಹೆಸರು ವಿಳಾಸವನ್ನು ತಿಳಿಯಲಾಗಿ ಎಂದು ಬರೆದಿದ್ದು, ಸದರಿ ಆಟೋ ಚಾಲಕನ ಹೆಸರು ಮತ್ತು ವಿಳಾಸವನ್ನು ಅಲ್ಲಿಯೇ ಇದ್ದ ಕೆಲಸದವರನ್ನು ಕೇಳಿ ತಿಳಿದುಕೊಂಡಿರುತ್ತೇವೆ. ಸದರಿ ಕೆಲಸಗಾರರು ಹೆಸರು ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ನನ್ನ ದೂರಿನಲ್ಲಿ ಬರೆಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಅಲ್ಲಿಯೇ ಇದ್ದ ಕೆಲಸಗಾರರಿಂದ ಆಟೋ ಚಾಲಕನ ಹೆಸರು ಕೇಳಿ ತಿದುಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ.

ನನ್ನ ಗಂಡನನ್ನು ಆಸ್ಪತ್ರೆ ಕರೆದುಕೊಂಡು ಹೋದಾಗ ಸಂಜೆ ಸುಮಾರು7.00 ಗಂಟೆ ಆಗಿತ್ತು. ಆಗ ಅಲ್ಲಿಗೆ ಇಬ್ಬರು ಪೋಲಿಸರು ಬಂದಿದ್ದರು. ಪೋಲಿಸರು ನನ್ನ ಗಂಡನಿಂದ ಅಪಘಾತದ ವಿಷಯವನ್ನು ಕೇಳಿ ತಿಳಿದುಕೊಂಡು, ನಂತರ ನನ್ನ ಗಂಡ ಹೇಳಿದ ವಿಷಯವನ್ನು ಪೋಲಿಸರು ಬರೆದುಕೊಂಡಿರುತ್ತಾರೆ. ಆ ಸಮಯದಲ್ಲಿ ನನ್ನ ಅಣ್ಣನು ಸಹ ಅಲ್ಲಿಯೇ ಇದ್ದರು. ಅವರ ಸಹ ಪೋಲಿಸರೊಂದಿಗೆ ಮಾತನಾಡಿದರು ಎಂದರೆ ನಿಜ. ನಾನು, ನನ್ನ ಮಾವ ಮತ್ತು ನನ್ನ ಅಣ್ಣ ಮೂವರು ಸೇರಿ ಒಟ್ಟಿಗೆ ಆಸ್ಪತ್ರೆಗೆ ಹೋಗಿದ್ದೇವು. ಪೋಲಿಸರು ಸಂಜೆ 7 ರಿಂದ 8.00 ಗಂಟೆ ಸಮಯದಲ್ಲಿ ಆಸ್ಪತ್ರೆಗೆ ಬಂದಿದ್ದರು. ನನ್ನ ಗಂಡನಿಂದ ಪೋಲಿಸರು ಪಡೆದ ಹೇಳಿಕೆಯನ್ನು ಪೋಲಿಸರು ದಾಖಲಿಸಿಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ವಿಚಾರದ ಬಗ್ಗೆ ನನ್ನ ಅಣ್ಣ ವಿಚಾರ ಮಾಡಿರುತ್ತಾರೆ. ಆಗ ನನ್ನ ಅಣ್ಣ ಮತ್ತೊಂದು ದೂರನ್ನು ಬರೆದುಕೊಡುತ್ತೇವೆ ಎಂದು ಪೋಲಿಸರಿಗೆ ಹೇಳಿದರು ಎಂದರೆ ಸರಿ. ಮಾರನೆ ದಿನ ನಾನು , ನನ್ನ ಅಣ್ಣ ತ್ತು ನನ್ನ ಕುಟುಂಬದವರು ಎಲ್ಲರೂ ಸೇರಿ ಪೋಲಿಸ್ ಠಾಣೆಗೆ ಹೋಗಿ ಮತ್ತೊಂದು ದೂರನ್ನು ದಾಖಲಿಸಿರುತ್ತೇವೆ. ಸದರಿ ಮತ್ತೊಂದು ದೂರನ್ನು ಸಲ್ಲಿಸಲು ನಾನೇ ಹೇಳಿರುತ್ತೇನೆ. ನನ್ನ ಅಣ್ಣ ಹೇಳಿದ ಕಾರಣ ಇನ್ನೊಂದು ದೂರನ್ನು ದಾಖಲಿಸಿದ್ದು, ನಾನೇ ಹೇಳಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆಯಲ್ಲಿ ಆರೋಪಿತನ ತಪ್ಪಿನಿಂದ ಅಪಘಾತವಾಗಿದೆ ಎಂಬುದರ ಬಗ್ಗೆ ಯಾವುದೆ ಸಂಗತಿ ಇರಲಿಲ್ಲ, ಆದ್ದರಿಂದ ನನ್ನ ಅಣ್ಣ ಇನ್ನೊಂದು ದೂರನ್ನು ಆರೋಪಿತರ ತಪ್ಪಿನಿಂದ ಆಗಿದೆ ಎಂದು ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ.2 ರಂತೆ ಮಾಡಿದ ಪಂಚನಾಮೆಯಲ್ಲಿ ನನ್ನ ಅಣ್ಣ ಪ್ರದೀಪ್, ಮಂಜು, ಅಣ್ಣಪ್ಪ , ಗಿಣಿ ಎನ್ನುವವರು ಸಹಿ ಮಾಡಿರುತ್ತಾರೆ. ಸದರಿಯವರು ಹೊಸಳ್ಳಿ ತಾಂಡ್ಯ ಗ್ರಾಮದವರು . ಅವರನ್ನು ನಾನೇ ಕರೆಸಿದ್ದೆ. ಪಂಚನಾಮೆ ಮಾಡಲು ಪೋಲಿಸರು ನನಗೆ ನೋಟಿಸ್ ನೀಡಿದ್ದರು. ನನ್ನ ಅಣ್ಣ ಪ್ರದೀಪ್, ಮಂಜು, ಅಣ್ಣಪ್ಪ , ಗಿಣಿ ರವರಿಗೆ ನೋಟಿಸ್ ನ್ನು ನೀಡಿರುವುದಿಲ್ಲ. ಸದರಿ ಪಂಚಾನಮೆಯನ್ನು ಮಾರನ ದಿನ ಬೆಳಗ್ಗೆ ಜರುಗಿಸಿದ್ದು, ಸಮಯ ನನಗೆ ನೆನಪಿಲ್ಲ. ಮಹಜರ್ ಮಾಡಲು ಒಬ್ಬ ಪೋಲಿಸ್ ಸಿಬ್ಬಂದಿ ಇದ್ದರು. ನಿಪಿ.2 ಕ್ಕೆ ಪೋಲಿಸರು ಹೇಳಿದ ಮೇರೆಗೆ ನಾವು ಎಲ್ಲರೂ ಸೇರಿ ಸಹಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ಕೈ ಬರವಣಿಗೆ ಮಾಡಿರುತ್ತಾರೆ. ಪಂಚನಾಮೆಯನ್ನು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ನಿಪಿ.2 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.3 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅಣ್ಣಪೂರ್ಣೇಶ್ವರಿ ಗೋಡಾಮಿನ ಪೂರ್ವಕ್ಕೆ ಉತ್ತರ ದಕ್ಷಿಣಾಭಿಮುಖವಾಗಿ ರಸ್ತೆಇದ್ದು, ದಕ್ಷಿಣಕ್ಕೆ ಇಳಿಜಾರು ರಸ್ತೆಯಿದೆ ಎಂದರೆ ಸರಿ.

ಆರೋಪಿ ಉಕ್ಕಡಗಾತ್ರಿ ದೇವಸ್ಥಾನಕ್ಕೆ ಸಿಮೆಂಟ್ ಚೀಲಗಳನ್ನು ಆಗಾಗ ಟಾಟಾ ಎ ಎಸ್ ವಾಹನದಲ್ಲಿ ತಂದು ಕೊಡುತ್ತಿದ್ದರು ಎಂದರೆ ಸರಿ. ಆರೋಪಿ ಅಪಘಾತವಾಗಿದೆ ಎಂದು ಹೇಳಲಾದ ದಿನ ತನ್ನ ಗಾಡಿಯಲ್ಲಿ 25 ಕೆ ಜಿ

ತೂಕದ 50 ಸಿಮೆಂಟ್ ಚೀಲಗಳನ್ನು ತಂದಿದ್ದರು ಎಂದರೆ ಸರಿ. ಆಗ ಹಮಾಲುರು ಇದ್ದರೆ, ತಕ್ಷಣವೆ ಸಿಮೆಂಟ್ ಚೀಲಗಳನ್ನು ಇಳಿಸುತ್ತಾರೆ ಇಲ್ಲದಿದ್ದರೆ ಹಮಾಲರು ಬಂದ ನಂತರ ಇಳಿಸುತ್ತಾರೆ ಎಂದರೆ ನಿಜ. ಆರೋಪಿ ಸಿಮೆಂಟ್ ಗಾಡಿಯನ್ನು ತಂದ ನಂತರ ಅಲ್ಲಿ ಹಮಾಲರು ಇಲ್ಲದ ಕಾರಣ, ಆರೋಪಿ ಅಲ್ಲಿಂದ ಗಾಡಿ ನಿಲ್ಲಿಸಿ ದೇವಸ್ಥಾನದ ಕಡೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಆ ದಿನ ಗೋಡಾಮಿನ ಪಕ್ಕದಲ್ಲಿ ಗಾಡಿ ನಿಲ್ಲಿಸಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ಗಾಡಿಯನ್ನು ಗೋದಾಮಿನ ಉತ್ತರಾಭಿಮುಖವಾಗಿ, ವಾಹನದ ಹಿಂದಿನ ಭಾಗವನ್ನು ಗೋಡಾಮಿನ ಕಡೆಗೆ ನಿಲ್ಲಿಸಿದ್ದರು ಎಂದರೆ ಸರಿ. ಆಗ ನನ್ನ ಗಂಡ ಆರೋಪಿಯ ಗಮನಕ್ಕೆ ತರದೆ ಏಕಾಏಕಿ ಸಿಮೆಂಟ್ ಚೀಲವನ್ನು ಇಳಿಸುತ್ತಿದ್ದರು ಎಂದರೆ ಸರಿಯಲ್ಲ. ಆಗ ನನ್ನ ಗಂಡ 10 ಚೀಲಗಳನ್ನು ಇಳಿಸಿದ್ದರು. ಆಗ ನನ್ನ ಗಂಡ ಸಿಮೆಂಟ್ ಚೀಲವನ್ನು ಜೋರಾಗಿ ಇಳಿಸಿದ್ದರಿಂದ, ಗಾಡಿಯು ಇಳಿಜಾರಿನಲ್ಲಿದ್ದರಿಂದ, ನಿಯಂತ್ರಣ ತಪ್ಪಿ ನನ್ನ ಗಂಡನ ತಪ್ಪಿನಿಂದಲೇ ಅಪಘಾತ ಸಂಬವಿಸಿರುತ್ತದೆ ಎಂದರೆ ಸರಿಯಲ್ಲ ಆರೋಪಿಯು ತನ್ನ ವಾಹನವನ್ನು ಗೇರ್ ಹಾಕಿ ಹ್ಯಾಂಡ್ ಬ್ರೆಕ್ ಹಾಕಿ ಕಲ್ಲನ್ನು ಇಟ್ಟು ನಿಲ್ಲಿಸಿದ್ದರು ಎಂದರೆ ಸರಿಯಲ್ಲ. ಆ ದಿನ ಆರೋಪಿಯು ವಾಹನಕ್ಕೆ ಕಲ್ಲನ್ನು ಇಡದೆ ನಿಲ್ಲಿಸಿದ್ದರು. ಈ ರೀತಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತ ಸಂಬವಿಸಿದೆ ಇದ್ದರು ಸಹ ಆರೋಪಿತನ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ, ನನ್ನ ಮಾವನಾಗಲೀ ಅಪಘಾತದ ಸಮಯದಲ್ಲಿ ಸ್ಥಳದಲ್ಲಿ ಇರಲಿಲ್ಲ ಮತ್ತು ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ, ಕಚ್ಚಾ ನಕಾಶೆಯನ್ನು ತಯಾರಿಸಿಲ್ಲ ಮತ್ತು ಯಾವುದೇ ಪೋಟೋವನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.